ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp 1-7.**
**©*IIMRD*, Mysuru**
IIMRD JOURNALS

**www.iimrd.com**

# ಕರ್ನಾಟಕದ ಕಂಬಳಿ ನೇಯ್ಗೆ ಮತ್ತು ಜಾಗತೀಕರಣದ ಪ್ರಭಾವ

**ಕರಿಯಮ್ಮ. ಜಿ. ಕೆ.* ಮತ್ತು ಡಾ. ಎಸ್. ನಾಗರತ್ನಮ್ಮ****

*ಸಂಶೋಧಕರು, ಇತಿಹಾಸ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
**ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

***ಸಾರಾಂಶ:(Abstract)***

*ಕರ್ನಾಟಕದಲ್ಲಿ ಅನೇಕ ಕರಕುಶಲ ಕಲೆಗಳ ಅಸ್ಥಿತ್ವವನ್ನು ಕಾಣಬಹುದು. ಅಂತಹ ಕರಕುಶಲ ಕಲೆಗಳಲ್ಲಿ ಕಂಬಳಿ ನೇಯ್ಗೆಯು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಬೆಂಗಳೂರು, ದೊಡ್ಡಬಳ್ಳಾಪುರ, ಹುಬ್ಬಳ್ಳಿ, ಗದಗ, ಇಳಕಲ್ ಮೊದಲಾದ ಪ್ರದೇಶಗಳಲ್ಲಿ ಈ ಉದ್ಯಮವನ್ನು ಅವಲಂಬಿಸಿದ್ದು, 19ನೆಯ ಶತಮಾನದಲ್ಲಿ ಸಂಪ್ರದಾಯಿಕ ಉದ್ದಿಮೆಗಳು ಪ್ರಾಮುಖ್ಯತೆ ಪಡೆದಿದ್ದು, 1862ರಲ್ಲಿ ಬೆಂಗಳೂರು ಮತ್ತು ಮೈಸೂರಿನಂತಹ ನಗರಗಳಲ್ಲಿ 12,000 ಮಗ್ಗಗಳಿದ್ದವೆಂದು, ಅವುಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯ ನಿರತವಾಗಿದ್ದವೆಂದು ತಿಳಿಸಿವೆ. ಕರ್ನಾಟಕದಲ್ಲಿ ನೇಯ್ಗೆ 1991ರ ಜಾಗತೀಕರಣದ ಪ್ರಭಾವದಿಂದ ಇಂದು ಕಂಬಳಿ ನೇಯ್ಗೆಗಳು ಅತಂತ್ರ ಸ್ಥಿತಿಯನ್ನು ತಲುಪಿರುವುದನ್ನು ಕಾಣಬಹುದು. ಪ್ರಸ್ತುತ ಈ ಸಂಶೋಧನಾ ಲೇಖನವು ಮಾಧ್ಯಮಿಕ ಮೂಲಗಳಿಂದ ಸಂಗ್ರಹಿತ ಮಾಹಿತಿಯನ್ನು ಬಳಸಿಕೊಂಡು ವಿಶ್ಲೇಷಣೆ ಮಾಡಲಾಗಿದೆ. ಪ್ರಸ್ತುತ ಕಂಬಳಿ ನೇಯ್ಗೆಯು ಜಾಗತೀಕರಣದ ಪ್ರಭಾವದಿಂದ ತನ್ನ ಸ್ಥಾನವನ್ನು ಕಳೆದುಕೊಂಡಿದೆ.*

***ಮುಖ್ಯಪದಗಳು (Keywords)*** *ಕಂಬಳಿ ನೇಯ್ಗೆ, ಜಾಗತೀಕರಣ, ಕರಕುಶಲ ಕಲೆಗಳು,* ರತ್ನಕಂಬಳಿ.

## ಪೀಠಿಕೆ

ಮಾನವ ವಸ್ತ್ರ ಧರಿಸುವುದಕ್ಕೆ ಕಾರಣ ಸ್ಥಳೀಯ ಹವಾಮಾನ. ಮಧ್ಯ ಯೂರೋಪಿನಲ್ಲಿ ಲಭಿಸಿದ ಆಧಾರದ ಮೇಲೆ ಹೊಸ ಶಿಲಾಯುಗದಲ್ಲಿ ಮಾನವನು ಚಳಿಯಿಂದ ಸಂರಕ್ಷಿಸಿಕೊಳ್ಳಲು, ಹುಲ್ಲಿನ ಗಟ್ಟಿನಾರಿನಿಂದ ನೇಯ್ಗೆ ಮಾಡಲು ಕಲಿತುಕೊಂಡ. ನಂತರ ಉಣ್ಣೆವಸ್ತ್ರಗಳನ್ನು ತಯಾರಿಸುವುದನ್ನು ಕಲಿತನು. ಈಜಿಪ್ಟ್, ಭಾರತದಂತಹ ಉಷ್ಣನಾಡುಗಳಲ್ಲಿ ಮೃದುವಾದ ಹತ್ತಿಯಿಂದ ಎಳೆ ತೆಗೆದು ವಸ್ತ್ರ ತಯಾರಿಸುವುದು ರೂಢಿಗೆ ಬಂದಿತು, ಕ್ರೈಸ್ತ ದಾಖಲೆಗಳಲ್ಲಿ ಆಡಂನಿಗೆ ಜೋಳದ ತೆನೆಯನ್ನು ಈವಾಳಿಗೆ ಒಂದು ಕುರಿಯನ್ನು ಕೊಟ್ಟು ಪುರುಷನು ವ್ಯವಸಾಯವನ್ನು ಸ್ತ್ರೀಯು ನೇಯ್ಗೆಯನ್ನು ಕೈಗೊಳ್ಳಬೇಕೆಂದು ಸೂಚಿಸಲಾಯಿತು. ದೇವರು ಮನುಷ್ಯನನ್ನು ಸೃಷ್ಟಿಸಿದರೆ ಮನುಷ್ಯ ಉಡುಪುಗಳನ್ನು ಸೃಷ್ಟಿಸುತ್ತಾನೆ.[1] ಹತ್ತಿ ಬಟ್ಟೆ ಮತ್ತು ನೇಯ್ಗೆ ಎಷ್ಟು

*Please cite this article as: ಕರಿಯಮ್ಮ. ಜಿ. ಕೆ. ಮತ್ತು ಡಾ. ಎಸ್. ನಾಗರತ್ನಮ್ಮ* (2023). ಕರ್ನಾಟಕದ ಕಂಬಳಿ ನೇಯ್ಗೆ ಮತ್ತು ಜಾಗತೀಕರಣದ ಪ್ರಭಾವ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 1–7.*

ಹಳೆಯದೆಂದು ಹೇಳಲು ಸಾಧ್ಯವಿಲ್ಲ. ಇತಿಹಾಸ ಪೂರ್ವದಲ್ಲಿ ಗುಹಾ ಚಿತ್ರಗಳಲ್ಲೆ ವಸ್ತ್ರಧಾರಿಗಳನ್ನು ಕಾಣಬಹುದು. ಪುರಾತನ ಈಜಿಪ್ಟ್ ರೋಮ್‌ಗಳ ಚಿತ್ರಶಿಲ್ಪಗಳಲ್ಲಿ ವೈವಿಧ್ಯಮಯತೆಯನ್ನು ವಸ್ತ್ರಗಳಲ್ಲಿ ಕಾಣಬಹುದು.

**ಕಂಬಳಿ ನೇಯ್ಗೆಯ ಐತಿಹಾಸಿಕ ಹಿನ್ನೆಲೆ**

ರಾಮಾಯಣ ಮತ್ತು ಮಹಾಭಾರತ ಕಾಲದಲ್ಲಿ ಈ ಕಂಬಳಿಗಳನ್ನು ಬಳಸುತ್ತಿದ್ದರೆಂದು ತಿಳಿದುಬರುತ್ತದೆ. 12ನೇ ಶತಮಾನ ವಚನದ ಸಾಹಿತ್ಯದಲ್ಲಿಯೂ ಕುಂಬಲಿ ಎಂಬ ಪದ ಬಳಕೆಯಾಗಿದೆ. ಕಲಾತ್ಮಕವಾದ ಕಂಬಳಿಗಳು ನಗರ ಮತ್ತು ಗ್ರಾಮಗಳೆನ್ನದೆ ಎಲ್ಲಾ ಕಾಲಾವಧಿಯಲ್ಲಿಯೂ ಬಳಸಲ್ಪಡುತ್ತಿದ್ದವು. ಕಂಬಳಿಗಳಲ್ಲಿ ಸುಮಾರು 6 ಬಗೆಯ ಕಂಬಳಿಗಳನ್ನು ನೇಯಲಾಗುತ್ತಿದ್ದಿತು.

1. ಹುರಿಗಂಬಳಿ–ಒರಟು ಉಣ್ಣೆ ಕಂಬಳಿ
2. ಉಜ್ಜುಗಂಬಳಿ–ಕಲಾತ್ಮಕವಾದ ಅಂಡಾಕಾರದ ರಗ್ಗುಗಳು

3 ಸಣ್ಣ ಕಂಬಳಿ–ಒಳ್ಳೆಯ ಉಣ್ಣೆಯಿಂದ ತಯಾರಾದುದು

4 ಶಾಲುಗಳು

5 ಗದ್ದುಗೆ ಕಂಬಳಿ–ಧಾರ್ಮಿಕ ಕಾರ್ಯಗಳಿಗೆ ಬಳಸುವುದು

6 ಕರಿಯ ಕಂಬಳಿ–ತ್ರಿಕೋನಾಕಾರದ ಉಣ್ಣೆಯ ಪವಿತ್ರ ಕಂಬಳಿ. ಬುಕನಾನ್ ಅವರು ಕಂಬಳಿಗಳ ಬಗ್ಗೆ ಹೆಚ್ಚಿನ ವಿವರಣೆ ನೀಡಿದ್ದಾರೆ.

ಉಣ್ಣೆಯಿಂದ ಮಾಡಿದ ಪ್ರಮುಖ ವಸ್ತುಗಳಲ್ಲಿ ಸಿದ್ದವಸ್ತುಗಳು, ಕಾರ್ಪೆಟ್‌ಗಳು, ಜಮಖಾನೆಗಳು, ಕಂಬಳಿಗಳು ಮೊದಲಾದವುಗಳನ್ನು ತಯಾರಿಸಲಾಗುತ್ತವೆ. ರತ್ನಗಂಬಳಿ ಮತ್ತು ಜಮಖಾನೆ ತಯಾರಿಕೆಯಲ್ಲಿ ರತ್ನಕಂಬಳಿಗಳು ಮೂಲತಃ ಪ್ರಾಚ್ಯ ಕಲೆಯಾಗಿದೆ. ಯಾವುದೇ ಪ್ರದೇಶಕ್ಕೆ ಪ್ರವೇಶ ಪಡೆಯುವ ಮೊದಲು ಪಾದರಕ್ಷೆಗಳನ್ನು ಕಳಚಿಡುವುದು ಶಿಷ್ಟಾಚಾರ ಅನುಸರಿಸುತ್ತಿದ್ದ ವ್ಯಾಪಕವಾಗಿ ಪೀಠೋಪಕರಣ ಬಳಸುತ್ತಿದ್ದಂತಹ ದೇಶಗಳಲ್ಲಿ ನೆಲದ ಮೇಲೆ ಹಾಸಲು ರತ್ನಗಂಬಳಿಯ ನೇಯ್ಗೆ ಸ್ವಾಭಾವಿಕವಾಗಿ ಆಯಿತು. ಈಜಿಪ್ಟ್‌ನಲ್ಲಿ ಹೆಲಿಯೊಪೋಲಿಸ್ನ ಪುರೋಹಿತರು ಧಾರ್ಮಿಕ ಕಾರಣಕ್ಕೆ ಬಳಸಿದರು. ಈಜಿಪ್ಟ್‌ನ ಫೆರುಗಳ ಕಾಲದಲ್ಲಿ ಅರಮನೆಯ ಅಲಂಕಾರಕ್ಕೆ ಶ್ವೇತ ಹಾಗೂ ಕಸೂತಿಯಿಂದ ವಿನ್ಯಾಸಗೊಂಡಂತಹ ವಿಭಿನ್ನ ವರ್ಣದಲ್ಲಿ ತಯಾರಾದಂಹ ರತ್ನಗಂಬಳಿಗಳು ಬಳಕೆಯಾದವು. ಟಾಲಮಿ ಫಿಲಿಡೆಲ್ಫಸ್‌ನು ಏರ್ಪಡಿಸಿದ್ದ ಭವ್ಯ ಔತಣ ಕೂಟದಲ್ಲಿ 200 ಚಿನ್ನದ ಆಸನಗಳ ಕೆಳಗೆ ಅತ್ಯುತ್ಕೃಷ್ಟ ಉಣ್ಣೆಯಿಂದ ತಯಾರಾದ ಬೂದು ಬಣ್ಣದ ರತ್ನ ಗಂಬಳಿಗಳನ್ನು ಹರಡಲಾಗಿದ್ದಿತು. ವಿಭಿನ್ನ ವರ್ಣದಲ್ಲಿ ವಸ್ತ್ರಗಳನ್ನು ನೇಯಲಾಗುತ್ತಿದ್ದಿತು. ಸೈರಸ್ನ ಗೋರಿಯ ಮೇಲೆ ಬೂದುಬಣ್ಣದ ರತ್ನಂಬಳಿಯನ್ನು ಹಾಸಲಾಗಿದ್ದಿತು. ಪರ್ಶಿಯಾದಲ್ಲಿ ಜಗತ್ತಿನ ಶ್ರೇಷ್ಠ ದರ್ಜೆಯ ರತ್ನಕಂಬಳಿಗಳು ತಯಾರಾಗುತ್ತಿದ್ದವು. ಪರ್ಶಿಯಾದ ಕಾರ್ಪೆಟ್‌ಗಳಿಗೆ ಜಗತ್ತಿನಾದ್ಯಂತ ಬೇಡಿಕೆ ಇದ್ದಿತು. ವಿವಿಧ ಬಗೆಯ ಇಸ್ಪಹಾನ್ ಕೆರ್ಮನ್, ಕಾಶನ್, ಹೆರಟ್, ತಾಬ್ರೀ ಮತ್ತಿತರ ಬಗೆಯಲ್ಲಿ ತಯಾರಾಗುತ್ತಿದ್ದವು.

ಅಲಂಕೃತಗೊಂಡಂತಹ ಕಂಬಳಿಗಳನ್ನು ಅರಬ್‌ರಾಷ್ಟ್ರಗಳಲ್ಲಿ ತಯಾರಾಗುತ್ತಿದ್ದಂಹವುಗಳು ಬೇಡಿಕೆ ಸೃಷ್ಟಿಸಿದವು. 1539ರಲ್ಲಿ ಮಖ್ಸೂದ್‌ಕಶಾನ್ ಎಂಬ ನೇಕಾರ ಸಫಾವಿದ್ ಕುಂಟುಂಬದ ಒಂದು ಸಮಾಧಿಗಾಗಿ ನೇಯ್ದಿದ್ದು, ಇದು ಈಗ ಲಂಡನ್ನಿನ ಆಲ್ಬರ್ಟ್ ಮ್ಯೂಸಿಯಂನಲ್ಲಿದೆ. ಭಾರತಕ್ಕೆ ಈ ಉದ್ಯಮವು 16ನೇ

ಶತಮಾನದಲ್ಲಿ ಪ್ರವೇಶಿಸಿತು. ಮೊಗಲ್ ಅರಸರಾದ ಅಕ್ಬರ್, ಜಹಾಂಗೀರ್, ಷಹಜಾಹಾನರ ಕಾಲದಲ್ಲಿ ರತ್ನಕಂಬಳಿಗಳ ಉತ್ಪಾದನೆ ವಾರಣಾಸಿ, ಮುರ್ಷಿದಾಬಾದ್‌ಗಳಲ್ಲಿ ಚಿನ್ನದ ಕಸೂತಿ ಕೆಲಸವಿದ್ದ ಮೃದುವಾದಂತಹಗಳು ತಯಾರಾಗುತ್ತಿದ್ದವು. ಜಹಂಗೀರನ ಕಾಲದಲ್ಲಿ ರತ್ನಕಂಬಳಿಗಳನ್ನು ಇಂಗ್ಲೆಂಡಿನಲ್ಲಿ ಪ್ರದರ್ಶನಗೊಂಡಿತು.

ಇಲ್ಲಿನ ಕಂಬಳಿಗಳ ಬೆಲೆ 1600 ರೂಪಾಯಿಯಿಂದ ಆರಂಭವಾಗಿ ಮೂರರಿಂದ ನಾಲ್ಕು ಸಾವಿರದ ರೂಪಾಯಿಗಳು. ಈ ನೇಯ್ಗೆಗೆ ತಾಲ್ಲೂಕಿನ ಸುಲೇಪೇಟೆಯೇ ಪ್ರಮುಖ ವ್ಯಾಪಾರ ಕೇಂದ್ರವಾಗಿದೆ. ಹೈದಾರಾಬಾದ್ ನಿಜಾಮನ ಕಾಲದಲ್ಲಿ ದೊರೆಯೊಬ್ಬರು ಈ ಗ್ರಾಮಕ್ಕೆ ಭೇಟಿ ನೀಡಿದಾಗ ಅವರಿಗೆ ಕಾಣಿಕೆಯಾಗಿ ಚಿಕ್ಕ ಬಿದರಿನ ಕೊಳವೆಯಲ್ಲಿಟ್ಟು ಕಂಬಳಿ ನೀಡುತ್ತಿದ್ದರೆಂದು ಉತ್ಕೃಷ್ಟ ದರ್ಜೆಯ ಹಾಗೂ ಸಂಪ್ರದಾಯಿಕ ಕಂಬಳಿಗಳು ರಚನೆಯಾಗುತ್ತಿದ್ದವು. ಕಂಬಳಿ ನೇಯುವ ಕಲೆಯನ್ನು ಉಳಿಸಿಕೊಳ್ಳಲು ಆಂಧ್ರಪ್ರದೇಶದ ಮೆಹಬೂಬ್ ನಗರಕ್ಕೆ ಕಂಬಳಿ ನೇಕಾರರನ್ನು ಕರೆದೊಯ್ದು ತರಬೇತಿ ನೀಡಲಾಗುತ್ತಿದೆ. ಯಾರೇ ಗಣ್ಯರು ಕೇಶ್ವರ ಗ್ರಾಮಕ್ಕೆ ಬಂದರೂ ಕಂಬಳಿಗಳಿಂದ ಸನ್ಮಾನ ಮಾಡಲಾಗುತ್ತಿತ್ತು.

**ಕರ್ನಾಟಕದಲ್ಲಿ ಕಂಬಳಿ ನೇಯ್ಗೆ ಉದ್ಯಮ**

ಕರ್ನಾಟಕದ ಬೆಂಗಳೂರಿನಲ್ಲಿ ತಯಾರಾಗುತ್ತಿದ್ದ ರತ್ನಕಂಬಳಿಗಳು ಮತ್ತು ಜಮಖಾನೆಗಳು ಬೇಡಿಕೆಗನುಗುಣವಾಗಿ ಈ ಕೈಗಾರಿಕಾಕ್ಷೇತ್ರ ಅಭಿವೃದ್ಧಿಗೊಂಡಿದ್ದಿತು. ಅಮೇರಿಕಾ, ಆಸ್ಟ್ರೇಲಿಯಾ, ಇಂಗ್ಲೆಂಡಿಗೆ ಇಲ್ಲಿನ ರತ್ನಕಂಬಳಿಗಳಿಗೆ ಅಪಾರ ಬೇಡಿಕೆ ಇದ್ದಿತು. ಬೆಂಗಳೂರಿನ ಸೆಂಟ್ರಲ್ ಬಂದೀಖಾನೆಯಲ್ಲಿ ಇಂತಹ ರತ್ನಕಂಬಳಿಗಳನ್ನು ತಯಾರಿಸುತ್ತಿದ್ದರು. ಸ್ಥಳೀಯ ಉಣ್ಣೆಯನ್ನು ಬಳಸುತ್ತಿದ್ದರು. ನೈಸರ್ಗಿಕ ವಸ್ತುಗಳು ಹಾಗೂ ಗಿಡಮೂಲಿಕೆಗಳಿಂದ ಬರುವ ಬಣ್ಣವನ್ನು ಬಳಸಿ ತಯಾರಿಸಲಾಗುತ್ತಿದ್ದಿತು. 6*3 ಮತ್ತು 7*4 ಅಡಿ ಅಳತೆಯಲ್ಲಿನ ರತ್ನಕಂಬಳಿಗಳಲ್ಲಿ ಸರ್ದಾರ್, ನವಿಲು ಮತ್ತು ಅಷಮ್‌ಖಾನಿ ಮಾದರಿಯಲ್ಲಿ ತಯಾರಾಗುತ್ತಿದ್ದವು. ಈ ರತ್ನಕಂಬಳಿಗಳನ್ನು ಈಗಲೂ ಸಹಾ ಉತ್ತರ ಕರ್ನಾಟಕದ ಅನೇಕ ಸ್ಥಳಗಳಲ್ಲಿ ಇವುಗಳನ್ನು ತಯಾರಿಸಲಾಗುತ್ತಿದೆ.

ಕರ್ನಾಟಕದಲ್ಲಿ ಅನೇಕ ಕರಕುಶಲಕಲೆಗಳ ಅಸ್ಥಿತ್ವವನ್ನು ಕಾಣಬಹುದು. ಹೈದರ್ ಮತ್ತು ಟಿಪ್ಪು ಸುಲ್ತಾನನ ಕಾಲದಲ್ಲಿ ಬೆಂಗಳೂರು, ದೊಡ್ಡಬಳ್ಳಾಪುರ, ಹುಬ್ಬಳ್ಳಿ, ಗದಗ, ಇಳಕಲ್ ಮೊದಲಾದ ಪ್ರದೇಶಗಳಲ್ಲಿ ಈ ಉದ್ಯಮವನ್ನು ಅವಲಂಬಿಸಿದ್ದು, 19ನೆಯ ಶತಮಾನದಲ್ಲಿ ಸಂಪ್ರದಾಯಿಕ ಉದ್ದಿಮೆಗಳು ಪ್ರಾಮುಖ್ಯತೆ ಪಡೆದಿದ್ದು 1862ರಲ್ಲಿ ಬೆಂಗಳೂರು ಮತ್ತು ಮೈಸೂರುಗಳಲ್ಲಿ 12000 ಮಗ್ಗಗಳಿದ್ದವೆಂದು ಅವುಗಳು ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರತವಾಗಿದ್ದವೆಂದು ತಿಳಸಿವೆ. ಬಿ.ಎಲ್.ರೈಸ್‌ಅವರು ಕಂಬಳಿ ತಯಾರಿಕೆಗೆ ದಾವಣಗೆರೆ, ಜಗಲೂರಿನ ತಾಲ್ಲೂಕುಗಳಲ್ಲಿ 4*12 ಉದ್ದಗಲದ ಬಿಳಿ ಮತ್ತು ಕರಿಯ ಕಂಬಳಿಗಳನ್ನು ತಯಾರಿಸಲಾಗುತ್ತಿದ್ದಿತು. ಇವುಗಳ ಬೆಲೆಯು ಸಾಮಾನ್ಯವಾಗಿ 200 ರೂ.ಗಳಿಂದ 300 ರೂ.ಗಳಾಗಿತ್ತೆಂದು ತಿಳಿಸಿದ್ದಾರೆ. ಕುರಿಗಳಿಂದ ಮೊದಲ ಸಲ ತುಪ್ಪಳ ಪಡೆದುಕೊಳ್ಳುತ್ತಿದ್ದರೆ 1 ರೂ. ನಿಂದ 12 ರೂ.ವರೆಗೆ ಹಣ ನೀಡಲಾಗುತ್ತಿದ್ದಿತು. ಕೆಲವು ಸಂದರ್ಭದಲ್ಲಿ 25 ರಿಂದ 40 ರೂ.ಗಳನ್ನು ನೀಡಲಾಗುತ್ತಿದ್ದಿತು. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು, ಚಳ್ಳಕೆರೆ, ಉಳಿದ ತಾಲ್ಲೂಕುಗಳಲ್ಲಿಯೂ ಉತ್ಪಾದಿಸಲಾಗುತ್ತಿದ್ದಿತು. ಘಟ್ಟದ ಮೇಲ್ಭಾಗದ ಪ್ರದೇಶಗಳಲ್ಲಿಯೂ, ಹತ್ತಿ, ಉಣ್ಣೆ, ನೂಲು, ಗೋಣಿ ಬಟ್ಟೆ ರಗ್ಗುಗಳು, ಕಬ್ಬಿಣ, ಉಕ್ಕು, ಶ್ರೀಗಂಧದ, ತೆಂಗು, ಅಡಿಕೆ ಮೊದಲಾದವು, ಶಿರಾ, ಬೆಂಗಳೂರುಗಳಲ್ಲಿ ಗೋಣಿ ಚೀಲಗಳು, ರಗ್ಗುಗಳು, ಕಬ್ಬಿಣ ಮತ್ತು ಉಕ್ಕು ಮೊದಲಾವುಗಳು ಉತ್ಪಾದನೆಯಾಗುತ್ತಿದ್ದವು.

ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಜವಹರ ರೋಜಗಾರ್ ಯೋಜನೆಗಳನ್ನು ಜಾರಿಗೆ ತಂದು ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿಗೆ ಹಾಗೂ ಉದ್ಯೋಗ ಸೃಷ್ಟಿಸುವ ಪ್ರಯತ್ನದಲ್ಲಿ ಯಶಸ್ಸು ಪಡೆಯಲಿಲ್ಲ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳು ಉದ್ಯೋಗವಿಲ್ಲದ ಬೆಳವಣಿಗೆಗೆ ಆದ್ಯತೆ ನೀಡಿತು. ಬಡವ ಮತ್ತು ಶ್ರೀಮಂತ 1990ರ ಕಾಲದಲ್ಲಿ ಅಧಿಕಗೊಂಡಿತು. (ನೋಪೈನ್‌ನೋಗೈನ್) ಕಡಿಮೆ ಜನರು ಹೆಚ್ಚಿನ ಲಾಭ ಪಡೆದರು. ಮಾರುಕಟ್ಟೆಯಾಧಾರಿತ ಉದ್ದಿಮೆಯಾಗಿದೆ.

1992ರ ಆರ್ಥಿಕ ಕ್ಷೇತ್ರದಲ್ಲಿನ ಮಹತ್ತರ ಬದಲಾವಣೆಗಳು ಈ ಉದ್ಯಮವನ್ನು ಇನ್ನೂ ನೆಲ ಕಚ್ಚುವಂತೆ ಮಾಡಿದೆ. ಈ ಉದ್ಯಮವು ಪುನರ್ರಚನೆ ಸಾಧ್ಯವೇ? ಇದರ ಪುನರ್ರಚನೆಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು, ಅವುಗಳ ಸಫಲತೆ ಮತ್ತು ವಿಫಲತೆ ಇವುಗಳ ಮೇಲೆ ಜಾಗತೀಕರಣದ ಪ್ರಭಾವ ಕುರಿತು ಈ ಪತ್ರಿಕೆಯಲ್ಲಿ ವಿಶ್ಲೇಷಿಸುವುದಾಗಿದೆ. ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳು ಗ್ರಾಮೀಣ ಉದ್ದಿಮೆಗಳು ತೀವ್ರತರವಾದ ಸವಾಲನ್ನು ಎದುರಿಸಬೇಕಾಯಿತು. ಕರ್ನಾಟಕ ಸರ್ಕಾರವು ಉಣ್ಣೆ ಉದ್ಯಮಕ್ಕೆ ಸಂಬಂಧಿಸಿದಂತೆ 5ನೇ ಪಂಚವಾರ್ಷಿಕ ಯೋಜನೆಯ ನಂತರ ಈ ಉದ್ಯಮದ ಬೆವಣಿಗೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದಲ್ಲಿ 1997ರಲ್ಲಿ ಕುರಿಯ ಉತ್ಪಾದನೆಯು 45.36 ಮಿಲಿಯನ್‌ಯಾಗಿದ್ದು ಈ ವೃತ್ತಿಯನ್ನು ಅವಲಂಬಿಸಿದವರಲ್ಲಿ ದೇಶದಲ್ಲಿ 4ನೇ ಸ್ಥಾನದಲ್ಲಿದೆ. ವಿವಿಧ ತಳಿಯ ಕುರಿ ಸಾಕಾಣಿಕೆಯು ಇದ್ದಿತು. 1997ರಲ್ಲಿ ವಿವಿಧ ತಳಿಯ ಕುರಿಗಳಲ್ಲಿ, ತುಮಕೂರು, ಬೆಳಗಾಂ, ಕೋಲಾರಗಳಲ್ಲಿ ಕ್ರಮವಾಗಿ 9,85,863, 876223 ಮತ್ತು 7,25,182ರಷ್ಟು ಇದ್ದರೆ ಮಿಶ್ರತಳಿಯ ಪ್ರಮಾಣ 3,34,532 ಹಾಗೂ 9,74,776 ಇದ್ದಿತು. ಸಮೀಕ್ಷೆಗಳು ಈ ಉದ್ದಿಮೆಯ ಬೆಳವಣಿಗೆಯ ದರ ಹಾಗೂ ಕರ್ನಾಟಕದಲ್ಲಿನ ವಿಭಾಗವಾರು ದೇಶೀಯ ತಳಿಯ ಹಾಗೂ ವಿದೇಶಿ ತಳಿಯ ಹಂಚಿಕೆಯನ್ನು ತಿಳಿಯಬಹುದು. ಈ ಕೆಳಗಿನ ಸಮೀಕ್ಷೆಗಳಲ್ಲಿ ವಿದೇಶಿ ಮಿಶ್ರ ತಳಿಯಲ್ಲಿ ಹಾಗೂ ಈ ಉದ್ದಿಮೆಯನ್ನು ಅವಲಂಬಿಸಿರುವುದು ಗಣನೀಯವಾಗಿ ಕಡಿಮೆಯಾಗಿದೆ. ಅಲ್ಲದೇ ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕರಣಗೊಂಡಿತು.

ಉಣ್ಣೆಯ ಪ್ರಮುಖ ವಸ್ತುಗಳಲ್ಲಿ ಕುರಿಯ ಉಣ್ಣೆಯಿಂದ ರಗ್ಗುಗಳು, ನೆಲಹಾಸುಗಳು, ಶಾಲುಗಳು, ಕಂಬಳಿಗಳನ್ನು ಉತ್ಪಾದನೆ ಮಾಡಲಾಗುತ್ತಿದ್ದಿತು. ಕರ್ನಾಟಕದ ಗ್ರಾಮೀಣ ಕಲೆಯಾಗಿ ಬೆಲೆಯಾಗಿ ಬೆಳೆದು ಬಂದಿದೆ. ನೇಯ್ಗೆ ಕಲೆಯಲ್ಲಿ ಬರುವ ಕಂಬಳಿ ಕಲೆಯು ಕರಕುಶಲ ಕಲೆಗಳಲ್ಲಿ ಒಂದಾಗಿದ್ದು, ಹಾಸುವ ಹಾಗೂ ಹೊದೆಯುವ ವಸ್ತ್ರವಾಗಿ ಬೆಳವಣಿಗೆ ಹೊಂದಿದ್ದಿತು. ಕರ್ನಾಟಕದಲ್ಲಿ ತುಂಬಾ ಹಿಂದಿನ ಕಾಲದಿಂದಲೂ ಕಂಬಳಿಗಳ ತಯಾರಿಕೆ ಒಂದು ಪರಂಪರಾನುಗತ ಉದ್ಯೋಗವಾಗಿ ಬೆಳೆದು ಬಂದಿದೆ. ಕರ ಮತ್ತು ಕರಿಯ ಉತ್ಪನ್ನಗಳ ಮೇಲೆ ಬದುಕು ಸಾಗಿಸುವ ಕೆಲವು ಜನಾಂಗಗಳಿಗೆ ಪರಂಪರಾನುಗತ ಉದ್ಯೋಗವಾಗಿ ಬೆಳೆದು ಬಂದಿದೆ. ಕಂಬಳಿಗಳ ತಯಾರಿಕೆಗೆ ಒಂದು ಪರಂಪರಾನುಗತ ಹಿನ್ನೆಲೆಯಿದ್ದು ಚಳಿ ಮಳೆಗಳಿಂದ ಉತ್ತಮ ರಕ್ಷಣೆ ಒದಗಿಸುತ್ತದೆ.

ಚಿತ್ರದುರ್ಗ ಮತ್ತು ದಾವಣಗೆರೆಗಳಲ್ಲಿ ಪ್ರದೇಶಗಳಲ್ಲಿ ಪ್ರಧಾನವಾಗಿ ಮಾರಾಟವಾಗುತ್ತಿದ್ದಿತು. ಕಂಬಳಿ ಅಳತೆ ಮತ್ತು ನೈಸರ್ಗಿಕ ಬಣ್ಣದ ಬಗ್ಗೆಯು ತಿಳಿಸಿದ್ದಾರೆ. 1980ರಲ್ಲಿ ಕರ್ನಾಟಕದಲ್ಲಿ ಕೈಗೊಂಡ ಸಮೀಕ್ಷೆಯ ಪ್ರಕಾರ 3,825 ಟನ್ ಉಣ್ಣೆ ಉತ್ಪಾದನೆಯಾದರೆ 2,500 ಕೈಮಗ್ಗಗಳು ಕಾರ್ಯನಿರ್ವಹಿಸಿದವು. 2,500 ಮಗ್ಗಗಳಲ್ಲಿ 1,800 ಮಗ್ಗಗಳು ಸಹಕಾರಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಕೋಲಾರ, ಬಿಜಾಪುರ, ಚಿತ್ರದುರ್ಗ,

ಬೆಳಗಾಂ ಗುಣಮಟ್ಟಕ್ಕೆ ಹೆಸರಾಗಿದ್ದವು. 90% ಸಹಕಾರಿ ನಿರತವಾಗಿದ್ದವು. ಈ ವಲಯದಲ್ಲಿ 87.89 ಮೌಲ್ಯದ ಕಂಬಳಿ ಹಾಗೂ ರಗ್ಗುಗಳು ಉತ್ಪಾದನೆಗೊಂಡ್ಡಿದ್ದಿತು. 17,000 ಕುಶಲಕರ್ಮಿಗಳು 35.66 ಲಕ್ಷ ಗಳಿಕೆ 120.67 ಲಕ್ಷ ಮೌಲ್ಯದ ವಸ್ತುಗಳು 14,770 ಕುಶಲಕರ್ಮಿಗಳು 39.70 ಲಕ್ಷದ ಗಳಿಕೆ ಪಡೆದಿದ್ದರು. ಆದರೆ ಇವುಗಳ ರಚನಾತ್ಮಕ ಬೆಳವಣಿಗೆಗೆ ಶ್ರಮಿಸಬೇಕಾಗಿದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಉಣ್ಣೆ ಉದ್ಯಮವು 1.7 ಮಿಲಿಯನ್ ಮತ್ತು 3,000 ತಾಂತ್ರಿಕ ಜವಳಿ 5 ಮಿಲಿಯನ್ ಸುಮಾರು 7 ಮಿಲಿಯನ್ ಪೂರಕ ಚಟುವಟಿಕೆಗಳು, 2 ಲಕ್ಷ ಕೆಲಸಗಳು, ಕೌಶಲ್ಯ ಮತ್ತು ಅರೆ ಕೌಶಲ್ಯಯುಕ್ತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆರ್ಥಿಕ ಸುಧಾರಣೆಗಳನ್ನು ತಂದ ನಂತರ ಖಾದಿ ಮತ್ತು ಗ್ರಾಮೀಣ ಉದ್ದಿಮೆಗಳು ತೀವ್ರ ಪೈಪೋಟಿ ಎದುರಿಸುತ್ತಿದ್ದಿತು. ಇದನ್ನು ತಪ್ಪಿಸುವ ಸಲುವಾಗಿ ಸರ್ಕಾರವು ಕೆಲವೊಂದು ಮಾರ್ಗಸೂಚಿಗಳನ್ನು ಹತ್ತನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಗೂ ಕೆಲವೊಂದು ಅಂಶಗಳನ್ನು ಉಲ್ಲೇಖಿಸಿದೆ.

ಕಂಬಳಿಗಳ ತಯಾರಿಕೆಗೆ ಕಚ್ಚಾ ಉಣ್ಣೆಯನ್ನೆ ಬಳಸುವುದರಿಂದ ಅವು ಒರಟಾಗಿರುತ್ತವೆ. ಬಣ್ಣವೂ ಸಹಾ ಉಣ್ಣೆಯ ಸ್ವಾಭಾವಿಕ ಬಣ್ಣವೇ ಆಗಿರುತ್ತದೆ. ಸಾಮಾನ್ಯವಾಗಿ ಕಪ್ಪು ಮತ್ತು ಬೂದು ಬಣ್ಣದ ಕಂಬಳಿಗಳನ್ನು ನೇಯಲಾಗುತ್ತಿದ್ದು, ಈ ಕಂಬಳಿಗಳಲ್ಲಿ ಕೆಲವು ವಿಶಿಷ್ಟ ವಿನ್ಯಾಸವನ್ನು ಬಳಸಿ ತಯಾರಿಸಲಾಗುತ್ತಿದ್ದಿತು. ಹೆಚ್ಚಿನ ತಾಂತ್ರಿಕ ಪರಿಣಿತಿಯಾಗಲೀ, ಕಲೆಗಾರಿಕೆಯಾಗಲೀ ಇಲ್ಲದೇ ಗ್ರಾಮೋದ್ಯೋಗವಾಗಿ ಬೆಳೆದ ತುಪ್ಪಟದ ಉತ್ಕೃಷ್ಟತೆ ಹಾಗೂ ಗದ್ದುಗೆ ಧಾವಳಿ, ಕರಿಯ ಕಂತೆ, ದಾಸೋಹದ ಸಂದರ್ಭದಲ್ಲಿ ಸಣ್ಣ ಕಂಬಳಿ ಮತ್ತು ಶಾಲುಗಳ ಸಮರ್ಪಣೆಯಾಗುತ್ತಿತ್ತು. ಪೂಜೆಯ ಸಂದರ್ಭದಲ್ಲಿ ಗದ್ದುಗೆ, ಧಾರ್ಮಿಕ ಹಾಗೂ ಸಾಮಾಜಿಕ ಆಚರಣೆಗಳಲ್ಲಿ ಬಳಸಲಾಗುತ್ತಿತ್ತು. ಇಂದು ವಿದ್ಯುತ್ ಮಗ್ಗಗಳಲ್ಲಿ ಪರಿಷ್ಕೃತ ಉಣ್ಣೆಯಿಂದ ತಯಾರಾಗುವ ರಗ್ಗುಗಳು ಕಂಬಳಿಗಳ ಸ್ಥಾನವನ್ನು ಪಡೆದುಕೊಳ್ಳುತ್ತಿವೆ. ರಗ್ಗುಗಳ ಸ್ಥಾನವನ್ನು ಪಡೆದುಕೊಳ್ಳುತ್ತಿರುವ ವಿವಿಧ ವರ್ಣ ಮತ್ತು ನಯವಾದ ತಯಾರಿಕೆಗಳಿಂದಾಗಿ ಬೆಂಗಳೂರು ಸುತ್ತಮುತ್ತಲ ಪರಿಸರದಲ್ಲಿ ಬೆಳೆದಿದ್ದಂತಹ ಈ ಕಲೆಯ ನಾಶದಂಚಿಗೆ ನಡೆದಿದೆ. ಇತ್ತೀಚೆಗೆ ಸರ್ಕಾರಗಳು ಇವುಗಳ ಪುನರುತ್ಥಾನಕ್ಕಾಗಿ ಶ್ರಮಿಸುತ್ತಿದೆ. ಕರ್ನಾಟಕದ ಸಾಂಸ್ಕೃತಿಕತೆಯ ಸಂಕೇತವಾಗಿದೆ. ಕರಕುಶಲಕಲೆಯಾದ ಈ ಉದ್ಯಮವು ಇಂದು ನಶಿಸಿ ಹೋಗುತ್ತಿದೆ. ಈ ಉದ್ದಿಮೆಯು ತನ್ನ ಅಸ್ಥಿತ್ವ ಉಳಿಸಿಕೊಳ್ಳಬೇಕಾದರೆ ಅನೇಕ ಪ್ರಯತ್ನಗಳು ಬೇಕಾಗಿದೆ. ಉಣ್ಣೆಯಿಂದ ಮಾಡಿದ ಪ್ರಮುಖ ವಸ್ತುಗಳಲ್ಲಿ ಸಿದ್ಧ ವಸ್ತುಗಳು, ಕಾರ್ಪೆಟ್‌ಗಳು, ಜಮಖಾನೆಗಳು, ಕಂಬಳಿಗಳು ಮೊದಲಾದವುಗಳನ್ನು ತಯಾರಿಸಲಾಗುತ್ತವೆ. ಕರ್ನಾಟಕ ಸರ್ಕಾರವು ಉಣ್ಣೆ ಉದ್ಯಮಕ್ಕೆ ಸಂಬಂಧಿಸಿದಂತೆ 5ನೇ ಪಂಚವಾರ್ಷಿಕ ಯೋಜನೆಯ ನಂತರ ಈ ಉದ್ಯಮದ ಬೆವಣಿಗೆಗೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

1997ರಲ್ಲಿ ಕುರಿಯ ಉತ್ಪಾದನೆಯನ್ನು ಅವಲಂಬಿಸಿದೆ 45.36 ಮಿಲಿಯನ್‌ಯಾಗಿದ್ದು, ಈ ವೃತ್ತಿಯನ್ನು ಅವಲಂಬಿಸಿದವರಲ್ಲಿ ದೇಶದಲ್ಲಿ 4ನೇ ಸ್ಥಾನದಲ್ಲಿದೆ. ವಿವಿಧ ತಳಿಯ ಕುರಿ ಸಾಕಾಣಿಕೆಯು ಇದ್ದಿತು. 1997ರಲ್ಲಿ ವಿವಿಧ ತಳಿಯ ಕುರಿಗಳಲ್ಲಿ, ತುಮಕೂರು, ಬೆಳಗಾಂ, ಕೋಲಾರಗಳಲ್ಲಿ ಕ್ರಮವಾಗಿ 9,85,863, 8,76,223 ಮತ್ತು 72,5182 ರಷ್ಟು ಇದ್ದರೆ ಮಿಶ್ರತಳಿಯ ಪ್ರಮಾಣ 3,34,532 ಹಾಗೂ 9,74,776 ಇದ್ದಿತು. ಸಮೀಕ್ಷೆಗಳು ಈ ಉದ್ದಿಮೆಯ ಬೆಳವಣಿಗೆಯ ದರ ಹಾಗೂ ಕರ್ನಾಟಕದಲ್ಲಿನ ವಿಭಾಗವಾರು ದೇಶೀಯ ತಳಿಯ ಹಾಗೂ ವಿದೇಶಿ ತಳಿಯ ಹಂಚಿಕೆಯನ್ನು ತಿಳಿಯಬಹುದು. ಈ ಕೆಳಗಿನ ಸಮೀಕ್ಷೆಗಳಲ್ಲಿ ವಿದೇಶಿ ಮಿಶ್ರ ತಳಿಯಲ್ಲಿ ಹಾಗೂ ಈ

ಉದ್ದಿಮೆಯನ್ನು ಅವಲಂಬಿಸಿರುವುದು ಗಣನೀಯವಾಗಿ ಕಡಿಮೆಯಾಗಿದೆ. ಅಲ್ಲದೇ ಕೆಲವೇ ಜಿಲ್ಲೆಗಳಲ್ಲಿ ಕೇಂದ್ರೀಕರಣಗೊಂಡಿದೆ. ಅನೇಕ ಪಂಚವಾರ್ಷಿಕ ಯೋಜನೆಗಳ ಮೂಲಕ ಉಣ್ಣೆಯ ಪ್ರಮುಖ ವಸ್ತುಗಳಲ್ಲಿ ಕುರಿಯ ಉಣ್ಣೆಯಿಂದ ರಗ್ಗುಗಳು, ನೆಲಹಾಸುಗಳು, ಶಾಲುಗಳು, ಕಂಬಳಿಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.

**ಸಂಶೋಧನಾ ವಿಧಾನ**

ಸಂಶೋಧಕರು ಪ್ರಸ್ತುತ ಅಧ್ಯಯನಕ್ಕೆ ಮಾದ್ಯಮಿಕ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಮಾದ್ಯಮಿಕ ಮೂಲಗಳಾದ ಪಠ್ಯಪುಸ್ತಕಗಳು, ಸಂಶೋಧನಾ ಲೇಖನಗಳು, ಕರ್ನಾಟಕ ಗ್ಯಾಸೆಟಿಯರ್ ಹಾಗೂ ಅಂತರ್ಜಾಲ ಮೂಲಗಳಿಂದ ಮಾಹಿತಿಯನ್ನು ಸಂಗ್ರಹಿಸಿ ವಿಶ್ಲೇಷಣೆ ಮಾಡಲಾಗಿದೆ. ಈ ಪ್ರಸ್ತುತ ಸಂಶೋಧನಾ ಲೇಖನವು ಐತಿಹಾಸಿಕ ಹಾಗೂ ವಿಶ್ಲೇಷಣಾತ್ಮಕ ಮಾದರಿಯ ಬಳಸಿಕೊಂಡು ಕರ್ನಾಟಕದಲ್ಲಿ ಕಂಬಳಿ ನೇಯ್ಗೆ ಮತ್ತು ಜಾಗತೀಕರಣದ ಪ್ರಭಾವದ ಕುರಿತು ಸಂಕ್ಷಿಪ್ತವಾಗಿ ಸಂಶೋಧನಾ ಹಿನ್ನಲೆಯಲ್ಲಿ ವಿಶ್ಲೇಷಣೆ ಮಾಡಲಾಗಿದೆ.

**ಸಂಶೋಧನಾ ಫಲಿತಗಳು**

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸಂಶೋಧಕರು ಕಂಡುಕೊಂಡ ಹಿನ್ನಲೆಯ ಮೂಲಕ ಪ್ರಮುಖ ಫಲಿತಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

1. 1991ರ ನೂತನ ಆರ್ಥಿಕ ನೀತಿಯಿಂದ ಜಾರಿಗೆ ತಂದ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣವು ಕಂಬಳಿ ನೇಯ್ಗೆಯ ಮೇಲೆ ನಕಾರಾತ್ಮಕ ಬೆಳವಣಿಗೆಯನ್ನು ಕಂಡಿತು.
2. ಜಾಗತೀಕರಣದ ಪ್ರಭಾವದಿಂದ ಕಂಬಳಿ ನೇಯ್ಗೆ ಉದ್ಯಮದಾರರು ಅತಂತ್ರ ಸ್ಥಿತಿಯನ್ನು ತಲುಪಿದರು.
3. ಕಂಬಳಿ ನೇಯ್ಗೆಗಾರರು ಜಾಗತೀಕರಣದ ಪ್ರಭಾವದಿಂದ ಉದ್ಯೋಗವನ್ನು ಕಳೆದುಕೊಂಡು ಕೂಲಿ ಕಾರ್ಮಿಕರಾದರು.

**ಕರ್ನಾಟಕದಲ್ಲಿ ಕಂಬಳಿ ನೇಯ್ಗೆ ಉದ್ಯಮಕ್ಕೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳು**

ಸರ್ಕಾರ ಕೈಗೊಂಡ ಕ್ರಮಗಳಲ್ಲಿ ಈ ಕೆಳಗಿನಂತಿವೆ:

1. ಗ್ರಾಮೀಣ ಕೈಗಾರಿಕೆಗಳ ಅಭಿವೃದ್ದಿಗೆ ಆದ್ಯತೆ.
2. ಹೆಚ್ಚಿನ ಪ್ರಮಾಣದ ಉದ್ಯೋಗಸೃಷ್ಟಿ.
3. ಮಾರುಕಟ್ಟೆ ಆಧಾರಿತ ವಸ್ತು ಉತ್ಪಾದನೆಯನ್ನು ಕೈಗೆತ್ತಿಕೊಳ್ಳುವುದು.
4. ಸ್ವಯಂ ಉದ್ಯೋಗಾವಕಾಶ ಒದಗಿಸುವುದು.
5. ಸ್ಥಳೀಯ ಸಂಪನ್ಮೂಲ ಹಾಗೂ ಕಚ್ಚಾಸಾಮಗ್ರಿಗಳ ಹಾಗೂ ಮಾನವ ಸಂಪನ್ಮೂಲ ಸದ್ಬಳಕೆ.
6. ವೈಜ್ಞಾನಿಕ ಮತ್ತು ತಾಂತ್ರಿಕ ಅಭಿವೃದ್ದಿಗೆ ಅವಕಾಶ ನೀಡುವುದು.
7. ಹಣಕಾಸಿನ ಸಹಕಾರದ ವಿಸ್ತರಣೆ.

8. ಅಪಾರ ಪ್ರಮಾಣದ ಮಗ್ಗಗಳ ರಚನೆಗೆ ಅವಕಾಶ.
9. ತಾಂತ್ರಿಕತೆ ಮತ್ತು ದಕ್ಷತೆಯ ಹೆಚ್ಚಳ.
10. ಮಾರುಕಟ್ಟೆಯ ವಿಸ್ತರಣೆ.
11. ಮಗ್ಗದಾರರ ಯೋಗಕ್ಷೇಮ ಕಾಯ್ದುಕೊಳ್ಳುವುದು.

ಪಂಚವಾರ್ಷಿಕ ಯೋಜನೆಗಳಲ್ಲಿ ಅನೇಕ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿತು. ಒಟ್ಟಾರೆ ಈ ಉದ್ಯಮದ ಪುನರ್ರಚನೆ ಅವಶ್ಯಕವಾಗಿದೆ.

**ಪರಾಮರ್ಶಿತ ಗ್ರಂಥಗಳು**


1. ಬೀಚನಹಳ್ಳಿ ಕರೀಗೌಡ (ಸಂ). (2000). ಕರಕುಶಲ ಕಲೆಗಳು. ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–2.
2. ಪಾಟೀಲ್. ಎಸ್. ಸಿ. (2001). ಹೈದರಾಬಾದ್ ಕರ್ನಾಟಕ ಸಾಂಸ್ಕೃತಿಕ ವಿಶ್ವಕೋಶ. ಜನಪದ ಸಂಪುಟ ಲಲಿತ ಕಲೆಗಳು. ಪು.40(ಸಂ).
3. T.K Laxman. (1966). Cottage and Small Scale Industries in Mysore, Rao Raghavan, part-11. pp.68.
4. Benjamin Lewis Rice (Ed). (2004) (Reprint) Mysore by Districts, West Minister Archibald Constable and company, 2 White hall Garden S-W. pp-509.
5. Buchanan Francis. (1807). Vol-03. A Journey from Madras through the countries Mysore, Canara and Malabar-Karnataka Gazetteer Deportment, Bangalore. pp-260.
6. S.U Kamath. (1982). Karnataka gazetteer.
7. ಮೈಸೂರು ದರ್ಶನ. ಸಂಪುಟ ಮೈಸೂರು.
8. Francis Buchanan. (1807). Journey from Madras through the countries of Mysore, Canara and alabar- government of Karnataka. Ool-3. pp-330.
9. Buchanan Francis. (1807). Vol-03. A Journey from Madras through the countries Mysore, Canara and Malabar, Karnataka Gazetteer Deportment, Bangalore. pp-260.